R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ– IV<br>**Part– IV** | ಬೆಂಗಳೂರು, ಶುಕ್ರವಾರ, ೧೦ , ಏಪ್ರಿಲ್, ೨೦೨೦ (ಚೈತ್ರ ೨೧, ಶಕವರ್ಷ ೧೯೪೨)<br>**Bengaluru, FRIDAY, 10 , APRIL, 2020 (Chaithra 21, ShakaVarsha 1942)** | ನಂ. ೧೩೪<br>**No. 134** |
|---|---|---|

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 23 ಶಾಸನ 2020, ಬೆಂಗಳೂರು ದಿನಾಂಕ: 10.04.2020.**

**ಅಧಿಸೂಚನೆ**

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧ್ಯಾದೇಶ, 2020 ಇದಕ್ಕೆ 2020ರ ಏಪ್ರಿಲ್ ತಿಂಗಳ 9ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 05 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2020 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 05**

**ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧ್ಯಾದೇಶ, 2020**

(ಭಾರತ ಗಣ ರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2020ರ ಏಪ್ರಿಲ್ 10ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 12)ದ ಉಪಬಂಧಗಳಲ್ಲಿ ಸಡಿಲಿಕೆಯನ್ನು ಒದಗಿಸಲು ಮತ್ತು ಅದಕ್ಕೆ ಸಂಬಂಧಿಸಿದಂತೆ ಅಥವಾ ಅದಕ್ಕೆ ಸಂಭವನೀಯವಾದ ವಿಷಯಗಳಿಗಾಗಿ ಒಂದು ಅಧ್ಯಾದೇಶ.

ಭಾರತವನ್ನೂ ಒಳಗೊಂಡಂತೆ, ಪ್ರಪಂಚದ ಬಹುರಾಷ್ಟ್ರಗಳ ವ್ಯಾಪ್ತಿಯಲ್ಲಿ ಕೋವಿಡ್–19 ಸರ್ವವ್ಯಾಪಿ ವ್ಯಾಧಿಯು ಹರಡಿ ಹೆಚ್ಚಿನ ಜನರ ಪ್ರಾಣಕ್ಕೆ ಹಾನಿಯನ್ನುಂಟು ಮಾಡಿರುವುದರಿಂದ, ಕಾಲಮಿತಿಯ ವಿಸ್ತರಣೆಯನ್ನು ಒಳಗೊಂಡಂತೆ, ಸದರಿ ಅಧಿನಿಯಮದ ಕೆಲವು ಉಪಬಂಧಗಳನ್ನು ಸಡಿಲಿಸುವುದು ಅನಿವಾರ್ಯವಾಗಿರುತ್ತದೆ;

ಕೇಂದ್ರ ಸರ್ಕಾರವು ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕೇಂದ್ರ ಅಧಿನಿಯಮ 12)ನ್ನು ತಿದ್ದುಪಡಿ ಮಾಡಿ ತೆರಿಗೆ ಮತ್ತು ಇತರ ಕಾನೂನುಗಳು (ಕೆಲವು ಉಪಬಂಧಗಳ ಸಡಿಲಿಕೆ) ಅಧ್ಯಾದೇಶ, 2020ನ್ನು ಈಗಾಗಲೇ ಪ್ರಖ್ಯಾಪಿಸಿರುವುದರಿಂದ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27) ರಲ್ಲಿಯೂ ಸಹ ಇಂತಹುದೇ ತಿದ್ದುಪಡಿಗಳನ್ನು ಮಾಡುವುದು ಅವಶ್ಯವಾಗಿರುತ್ತದೆ;

ಈಗ ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ನ್ನು (2017ರ ಕರ್ನಾಟಕ ಅಧಿನಿಯಮ 27) ತಿದ್ದುಪಡಿ ಮಾಡಲು ಕೂಡಲೇ ಕ್ರಮ ಕೈಗೊಳ್ಳಲು ಅವಶ್ಯಕವಾದ ವಿದ್ಯಮಾನಗಳು ಉಂಟಾಗಿವೆ ಎಂದು ಕರ್ನಾಟಕದ ಘನತೆವೆತ್ತ ರಾಜ್ಯಪಾಲರಿಗೆ ಮನದಟ್ಟಾಗಿರುವುದು;

ಆದ್ದರಿಂದ, ಈಗ, ಭಾರತ ಸಂವಿಧಾನದ ಅನುಚ್ಛೇದ 213ರ ಖಂಡ (1)ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ಈ ಕೆಳಕಂಡ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಹರ್ಷಿಸುತ್ತಾರೆ, ಅಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-**(1) ಈ ಅಧ್ಯಾದೇಶವನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧ್ಯಾದೇಶ, 2020 ಎಂದು ಕರೆಯತಕ್ಕದ್ದು.

(2) ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧ್ಯಾದೇಶದ ಉಪಬಂಧಗಳು 2020ರ ಮಾರ್ಚ್ ತಿಂಗಳ 31ನೇ ದಿನದಿಂದ ಜಾರಿಗೆ ಬಂದಿವೆ ಎಂದು ಪರಿಭಾವಿಸತಕ್ಕದ್ದು.

**2. ಹೊಸ ಪ್ರಕರಣ 168ಎ ಸೇರ್ಪಡೆ.-**ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಪ್ರಕರಣ 168ರ ನಂತರ, ಈ ಕೆಳಕಂಡ ಪ್ರಕರಣವನ್ನು ಸೇರಿಸತಕ್ಕದ್ದು, ಅಂದರೆ:-

**"168ಎ. ವಿಶೇಷ ಸನ್ನಿವೇಶಗಳಲ್ಲಿ ಕಾಲ ಮಿತಿಯನ್ನು ವಿಸ್ತರಿಸಲು ಸರ್ಕಾರದ ಅಧಿಕಾರ.-** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಸಹ, ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಅಧಿಸೂಚನೆಯ ಮೂಲಕ, ಎದುರಿಸಲಾಗದ ಶಕ್ತಿಯಿಂದಾಗಿ ಪೂರ್ಣಗೊಳಿಸಲಾಗದ ಅಥವಾ ಅನುಸರಿಸಲಾಗದ ಕಾರ್ಯಗಳಿಗೆ ಸಂಬಂಧಿಸಿದಂತೆ, ಈ ಅಧಿನಿಯಮದಲ್ಲಿ ಅಥವಾ ಇದರಡಿಯಲ್ಲಿ ನಿಯಮಿಸಲಾದ ಅಥವಾ ಅಧಿಸೂಚಿಸಲಾದ ಕಾಲಮಿತಿಯನ್ನು ವಿಸ್ತರಿಸಬಹುದು.

(2) ಉಪಪ್ರಕರಣ (1)ರ ಅಡಿಯಲ್ಲಿನ ಅಧಿಸೂಚನೆ ಹೊರಡಿಸುವ ಅಧಿಕಾರವು, ಈ ಅಧಿನಿಯಮದ ಪ್ರಾರಂಭದ ದಿನಕ್ಕಿಂತ ಮುಂಚಿನದಲ್ಲದ ಒಂದು ದಿನದಿಂದ ಪೂರ್ವಾನ್ವಯವಾಗಿ ಅಂಥ ಅಧಿಸೂಚನೆಯನ್ನು ಜಾರಿಗೊಳಿಸುವ ಅಧಿಕಾರವನ್ನು ಒಳಗೊಂಡಿರತಕ್ಕದ್ದು.

**ವಿವರಣೆ.-** ಈ ಪ್ರಕರಣದ ಉದ್ದೇಶಗಳಿಗಾಗಿ, "ಎದುರಿಸಲಾಗದ ಶಕ್ತಿ" ಪದಾವಳಿಯು ಯುದ್ಧ, ಸಾಂಕ್ರಾಮಿಕ ರೋಗ, ಪ್ರವಾಹ, ಅಗ್ನಿ, ಚಂಡಮಾರುತ, ಭೂಕಂಪ ಅಥವಾ ನಿಸರ್ಗದಿಂದ ಅಥವಾ ಅನ್ಯಥಾ ಉಂಟಾಗುವ ವಿಪತ್ತಿನಿಂದಾಗಿ ಈ ಅಧಿನಿಯಮದ ಯಾವುದೇ ಉಪಬಂಧಗಳ ಅನುಷ್ಠಾನದ ಮೇಲೆ ಪರಿಣಾಮ ಬೀರುವ ಒಂದು ಪ್ರಕರಣ ಎಂದು ಅರ್ಥೈಸುವುದು.".

**ವಜೂಭಾಯಿ ವಾಲಾ**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

PARLIAMENTARY AFFAIRS AND LEGISLAITON SECRETARIAT

**NOTIFICATION**

**No. DPAL 23 SHASANA 2020, Bengaluru, dated: 10.04.2020**

**ಅಧಿಸೂಚನೆ**

The Karnataka Goods and Services Tax (Amendment) Ordinance, 2020 ಇದಕ್ಕೆ 2020ರ ಏಪ್ರಿಲ್ ತಿಂಗಳ 9ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:05 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**KARNATAKA ORDINANCE NO. 05 OF 2020**

**THEKARNATAKAGOODSANDSERVICESTAX(AMENDMENT) ORDINANCE,2020**

(Promulgated by the Governor of Karnataka in the Seventy firstyear of the Republic of India and First published in the Karnataka Gazette Extra-ordinary on the 10th day of April, 2020)

An Ordinance to provide relaxation in the provisions of the Karnataka Goods and Services Tax Act, 2017 (Karnataka Act 27 of 2017) and for matters connected therewith or incidental thereto.

Whereas, in view of the spread of pandemic of COVID -19 across many countries of the world including India, causing immense loss to the lives of people, it has become imperative to relax certain provisions, including extension of time limit in the said Act.

Whereas the Central Government has already promulgated the Taxation and Other Laws (Relaxation of Certain Provisions) Ordinance, 2020to amend the Central Goods and Services Tax Act, 2017 (Central Act 12 of 2017) and similar amendments have to be made in the Karnataka Goods and Services Tax Act, 2017 (Karnataka Act 27 of 2017).

Whereas both the Houses of the State Legislature are not in session and Honourable Governor of Karnataka is satisfied that the circumstances exist which render it necessary for him to take immediate action, further to amend the Karnataka Goods and Services Tax Act, 2017 (Karnataka Act 27 of 2017) for the purposes hereinafter appearing;

Now, therefore in exercise of the powers conferred by clause (1) of Article 213 of the Constitution of India, Honourable Governor of Karnataka is pleased to promulgate the following Ordinance, namely:-

**1. Short title and Commencement.-** (1) This Ordinance may be called the Karnataka Goods and Services Tax (Amendment) Ordinance,2020.

(2) Save as otherwise provided, the provisions of this Ordinance shall be deemed to have come into force on the 31st day of March, 2020.

**2. Insertion of new section 168A.-** Aftersection168oftheKarnataka GoodsandServicesTaxAct,2017, the following section shall be inserted, namely:–

"**168A. Power of Government to extend time limit in special circumstances.-**(1) Not-withstanding anything contained in this Act, the Government may, on the recommendations of the Council, by notification, extend time limit specified in, or prescribed or notified under, this Act in respect of actions which cannot be completed or complied with due to force majeure.

(2) The power to issue notification under sub-section (1) shall include the power to give retrospective effect to such notification from a date not earlier than the date of commencement of this Act.

**Explanation.-**For the purposes of this section, the expression "force majeure" means a case of war, epidemic, flood, drought, fire, cyclone, earthquake or any other calamity caused by nature or otherwise affecting the implementation of any of the provisions of this Act.".

**VAJUBHAI VALA**
**GOVERNOR OF KARNATAKA**

By order and in the name of the
Governor of Karnataka,

**(K. DWARAKANATH BABU)**
Secretary to Government
Department of Parliamentary Affairs and
Legislation.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE